28 ನೆಯ ನವೆಂಬರ್ 2013

ಸನ್ಮಾನ್ಯ ಪ್ರಧಾನಮಂತ್ರಿಯವರೆ,

ಭಾರತೀಯ ಉಕ್ಕು ಪ್ರಾಧಿಕಾರ (ಸೈಲ್) ತನ್ನ ಸುಪರ್ದಿನಲ್ಲಿರುವ ಕರ್ನಾಟಕದ ಹೆಮ್ಮೆಯ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕು (ವಿ.ಐ.ಎಸ್.ಎಲ್) ಕಾರ್ಖಾನೆಯನ್ನು ಒಂದು ಖಾಸಗಿ ಕಂಪನಿಯೊಂದಿಗೆ ಜಂಟಿ ಉದ್ಯಮವನ್ನಾಗಿ ಪರಿವರ್ತಿಸುವ ನಿರ್ಧಾರದಿಂದಾಗಿ ಅನಿಶ್ಚಿತ ಭವಿಷ್ಯವನ್ನೆದುರಿಸುತ್ತಾ ಸಂಕಷ್ಟವನ್ನನುಭವಿಸುತ್ತಿರುವ ಕರ್ನಾಟಕ ರಾಜ್ಯದ ಭದ್ರಾವತಿ ನಗರದ ಸಾವಿರಾರು ಜನರ ಸಂಕಷ್ಟಗಳತ್ತ ತಮ್ಮ ಗಮನವನ್ನು ಸೆಳೆಯಲು ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ.

ಜಂಟಿ ಉದ್ದಿಮೆಯ ಪ್ರಸ್ತಾಪ ಖಾಸಗೀಕರಣದತ್ತ ಮೊದಲ ಹೆಜ್ಜೆಯೆಂದು ಭಾವಿಸಿ ತಮ್ಮ ಮತ್ತು ತಮ್ಮ ಕುಟುಂಬಗಳ ಭವಿಷ್ಯದ ನಿಟ್ಟಿನಲ್ಲಿ ಆತಂಕಗೊಂಡಿರುವ ಅನೇಕ ಭದ್ರಾವತಿಯ ನಿವಾಸಿಗಳ ಅಹವಾಲುಗಳು ನನಗೆ ತಲುಪಿದೆ. ಈಗೊಂದು ವರ್ಷದ ಹಿಂದನವರೆಗೂ ಸೈಲ್ ನ ನಾಯಕತ್ವ ಉನ್ನತ ತಂತ್ರಜ್ಞಾನ ಮತ್ತು ವಿ.ಐ.ಎಸ್.ಎಲ್ ನ ಆಧುನೀಕರಣಕ್ಕೆ ಆರ್ಥಿಕ ಬೆಂಬಲದ ಕುರಿತು ಮಾತನಾಡುತ್ತಿತ್ತು. ಆದ್ದರಿಂದಲೆ, ಈಗ ಯಾವ ಬದಲಾವಣೆಗಳುಂಟಾಗಿ ಸೈಲ್ ಆಸಕ್ತಿ ನಿರೂಪಣಾ ಪತ್ರವನ್ನು ಹೊರಡಿಸಿ ಜಂಟಿ ಉದ್ಯಮ ಪಾಲುದಾರರನ್ನು ಹುಡುಕುತ್ತಿದೆಯೆಂಬುದು ಎಂಬುದೇ ತಿಳಿಯುತ್ತಿಲ್ಲ.

ತಮಗೆ ತಿಳಿದೇ ಇರುವಂತೆ, ವಿ.ಐ.ಎಸ್.ಎಲ್ ಕಾರ್ಖಾನೆಯು 1923ರಲ್ಲಿ ಭಾರತರತ್ನ ಸರ್.ಎಂ.ವಿಶ್ವೇಶ್ವರಾಯನವರಿಂದ ಸ್ಥಾಪಿಸಲ್ಪಟ್ಟಿದ್ದು ರಕ್ಷಣಾ ಮತ್ತು ವಿಮಾನಯಾನದಂತಹ ಪ್ರಮುಖ ವಲಯಗಳಿಗೆ ಮಿಶ್ರಲೋಹ ಉಕ್ಕನ್ನು ಸರಬರಾಜು ಮಾಡುತ್ತಿತ್ತು. ಇದು ಕರ್ನಾಟಕದ ಇತಿಹಾಸ ಮತ್ತು ಕೈಗಾರೀಕರಣದ ಪ್ರತೀಕವಾಗಿರುವಂತೆಯೇ ಕರ್ನಾಟಕದದ ಪ್ರಾದೇಶಿಕ ಆರ್ಥಿಕತೆಯ ಅವಿಭಾಜ್ಯ ಅಂಗವೂ ಆಗಿದೆ.

1989ರಲ್ಲಿ ಸೈಲ್ ವಿ.ಐ.ಎಸ್.ಎಲ್ ಅನ್ನು ಸ್ವಾಧೀನಪಡಿಸಿಕೊಂಡ ನಂತರ ಆಧುನೀಕರಣದ ಯೋಜನೆಗಳ ಕುರಿತು ಭರವಸೆ ನೀಡಿದ್ದರೂ ಅದೆಂದಿಗೂ ಅನುಷ್ಠಾನಗೊಳ್ಳಲೆ ಇಲ್ಲ. ನೀಡಿದ ವಾಗ್ದಾನದಂತೆ ಕಾರ್ಖಾನೆಯನ್ನು ಆಧುನೀಕರಣಗೊಳಿಸಲು ವಿಫಲವಾಗಿ ವಿ.ಐ.ಎಸ್.ಎಲ್ ಯಾವ ಹೂಡಿಕೆಯನ್ನು ಹೊಂದಲಿಲ್ಲ ಮತ್ತು 2004 ರಲ್ಲಿ ಅದರ ವಶದಲ್ಲಿದ್ದ ಕೆಮ್ಮಣ್ಣುಗುಂಡಿಯ ಗಣಿಗುತ್ತಿಗೆಯ ಕೊನೆಗೊಂಡಿತು. ಕಳೆದ ಒಂಬತ್ತು ವರ್ಷಗಳಿಂದ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಭರವಸೆಗಳ ಹೊರತಾಗಿಯೂ ವಿ.ಐ.ಎಸ್.ಎಲ್ ಎಲ್ಲಿಯೂ ಮೀಸಲು ಗಣಿ ಪ್ರದೇಶವನ್ನು ಪಡೆಯಲಿಲ್ಲ. 1989 ಆಗಸ್ಟ್ 18ರಂದು ಅಂದಿನ ಪ್ರಧಾನಮಂತ್ರಿಗಳಾದ ಶ್ರೀ ರಾಜೀವ್ ಗಾಂಧಿಯವರು ಔಪಚಾರಿಕವಾಗಿ ಸೈಲ್ ನ್ ಅಂಗಸಂಸ್ಥೆಯನ್ನಾಗಿ ಪಡೆದ ಕಾರ್ಖಾನೆ ಇಂದು ಈ ಅವಸ್ಥೆ ತಲುಪಿರುವುದು ನಿಜಕ್ಕೂ ಶೋಚನೀಯ ವಿಷಯವಾಗಿದೆ.

ಸಾರ್ವಜನಿಕ ವಲಯದ ಉದ್ದಿಮೆಗಳನ್ನು (ಪಿ.ಎಸ್.ಯು) ನಷ್ಟದ ಅಂಚಿಗೆ ತಂದು ನಂತರ ಅತಿರೇಕದ ಮತ್ತು ಅನಾರೋಗ್ಯಕರ ಆಯ್ಕೆಗಳಲ್ಲಿ ಒಂದನ್ನು ಆಯ್ದೊಕೊಳ್ಳಬೇಕು ಇಲ್ಲವೆ ಮುಚ್ಚಲ್ಪಡಬೇಕೆನ್ನುವಂತೆ ಪಿ.ಎಸ್.ಯು ಗಳ ಕುರಿತು  ಸರ್ಕಾರದ ನಡೆಯಲ್ಲಿ ದೋಷವಿರುವುದು ಸ್ಪಷ್ಟವಾಗಿದೆ. ವಿ.ಐ.ಎಸ್.ಎಲ್ ನ ಬೆಳವಣಿಗೆ ಮತ್ತು ಮೌಲ್ಯ ಸೃಷ್ಠಿಯ ಬಗ್ಗೆ ಸರ್ಕಾರ ನಿಖರವಾದ ಮಾರ್ಗಸೂಚಿ ಮತ್ತು ಯೋಜನೆಗಳನ್ನು ಹೊಂದಬೇಕು. ಅಂತಹ ಎಲ್ಲ ಸಾಅರ್ವಜನಿಕ ಉದ್ದಿಮೆಗಳು ಆಯಾ ಸ್ಥಳಗಳಲ್ಲಿ ಸ್ಥಳೀಯ ಸಮುದಾಯಗಳನ್ನು

ಘೋಷಿಸುವುದರಿಂದ ಸರ್ಕಾರ ಅವುಗಳನ್ನು ತೆರಿಗೆದಾರರ ಈಕ್ವಿಟಿಗಳಂತೆ ಪರಿಗಣಿಸಬೇಕು. ಈಗಿನ 'ಪ್ರತಿಕ್ರಿಯಾತ್ಮಕ ಆರಂಭ -- ಸ್ಥಗಿತ' ಮಾದರಿಯ ನಡೆಯಿಂದ ಈಗಾಗಲೆ ಹೂಡಲಾಗಿರಿವ ಸಾವಿರಾರು ಕೋಟಿ ರೂಪಾಯಿಗಳ ತೆರಿಗೆದಾರರ ಹಣ ಪೋಲಾಗುವ ಅಪಾಯವಿದೆ. ಸಾರ್ವಜನಿಕ ಉದ್ದಿಮೆಗಳ ಕುರಿತಾದ ಎಲ್ಲ ನಿರ್ಧಾರಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ಸಾಧಕ ಬಾಧಕಗಳನ್ನು ನಿಶ್ಚಯಿಸಿ ಮತ್ತು ಸಾಧ್ಯಾಸಾಧ್ಯತೆಗಳ ಎಲ್ಲಾ ಅಂಶಗಳನ್ನು ಪರಿಗಣಿಸಿ ಸರ್ಕಾರ ತೆಗೆದುಕೊಳ್ಳಬೇಕು.

ವಿ.ಐ.ಎಸ್.ಎಲ್ ಗಾಗಿ ಕರ್ನಾಟಕ ಸರ್ಕಾರ ಸಲ್ಲಿಸಿರುವ 243 ಎಕರೆ ಗಣಿಪ್ರದೇಶದ ಪ್ರಸ್ತಾಪವನ್ನು ಭಾರತ ಸರ್ಕಾರವು ತಕ್ಷಣವೆ ಅಂಗೀಕರಿಸಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಬಂಡವಾಳ ಹೂಡಿಕೆ ಮತ್ತು ಆಧುನೀಕರಣ ಪ್ರಕ್ರಿಯೆಗಳಿಂದ ವಿ.ಐ.ಎಸ್.ಎಲ್ ಅನ್ನು ಪುನರುತ್ಥಾನಗೊಳಿಸುವುದರ ಜೊತೆಗೆ ವಿ.ಐ.ಎಸ್.ಎಲ್ ಅನ್ನು ಖಾಸಗೀಕರಣಗೊಳಿಸುವ ಯಾವುದೇ ಯೋಜನೆಯಿಂದ ಹಿಂದೆ ಸರಿಯಬೇಕು ಹಾಗು ವಿ.ಐ.ಎಸ್.ಎಲ್ ಕೂಡ ಸ್ಯೆಲ್ ನ ಪ್ರಸ್ತಾವಿತ ೭೦ ಸಾವಿರ ಕೋಟಿ ಆಧುನೀಕರಣ ಕಾರ್ಯಕ್ರಮದ ಭಾಗವಾಗುವಂತೆ ಭಾರತ ಸರ್ಕಾರ, ಕೇಂದ್ರ ಉಕ್ಕು ಸಚಿವಾಲಯ ಮತ್ತು ಸ್ಯೆಲ್ ಗಂಭೀರ ಪ್ರಯತ್ನಗಳನ್ನು ಕೂಡಲೆ ಪ್ರಾರಂಭಿಸಿಬೇಕೆಂದು ಈ ಮೂಲಕ ತಮ್ಮಲ್ಲಿ ನಾನು ಒತ್ತಾಯಪೂರ್ವಕವಾಗಿ ವಿನಂತಿಸುತ್ತಿದ್ದೇನೆ.
ಧನ್ಯವಾದಗಳು

ತಮ್ಮ ವಿಶ್ವಾಸಿ,

ರಾಜೀವ್ ಚಂದ್ರಶೇಖರ್

**ಡಾ. ಮನಮೋಹನ್ ಸಿಂಗ್**
ಸನ್ಮಾನ್ಯ ಪ್ರಧಾನಮಂತ್ರಿಗಳು
ಭಾರತ ಸರ್ಕಾರ
ನವದೆಹಲಿ